# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಜಿಎಂ/2497/2021/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು
ದಿನಾಂಕ: 28.02.2023.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ

ವಿಷಯ: (1) ಶ್ರೀಮತಿ ರಾಜಶ್ರೀ ಜೈನಾಪುರೆ, ಭೂ ಸ್ವಾಧೀನಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಪ್ರಸ್ತುತ ಕಾರ್ಯದರ್ಶಿ, ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ಬೆಂಗಳೂರು (2) ಶ್ರೀ ಸಂಜೀವ ಬಾಳಪ್ಪ ಮಂಡಲಿ, ಅಂದಿನ ಗ್ರಾಮ ಲೆಕ್ಕಾಧಿಕಾರಿ, ಮಣಗುತ್ತಿ ಗ್ರಾಮ, ಹುಕ್ಕೇರಿ ತಾಲೂಕು, ಪ್ರಸ್ತುತ ಕಂದಾಯ ನಿರೀಕ್ಷಕರು, ತಾಲೂಕು ಕಛೇರಿ, ಖಾನಾಪುರ, ಬೆಳಗಾವಿ ಜಿಲ್ಲೆ ರವರುಗಳು ಸರ್ಕಾರಿ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

*****

1. ದೂರುದಾರರಾದ ಶ್ರೀ. ಶಿವನಗೌಡ ಮಹಾಲಿಂಗಪ್ಪ ಪಾಟೀಲ್, ಪ್ಲಾಟ್ ನಂ.655, ದೂರದರ್ಶನ ನಗರ, ಬೆಳಗಾವಿ ಜಿಲ್ಲೆ, ಇವರು 1)ವಿಶೇಷ ಭೂ ಸ್ವಾಧೀನಾಧಿಕಾರಿಗಳು, ಹಿಡಕಲ್ ಡ್ಯಾಂ, ಬೆಳಗಾವಿ ಜಿಲ್ಲೆ, 2)ಶ್ರೀಮತಿ ರಾಜೇಶ್ವರಿ ಜೈನಾಪುರ, ಹಿಂದಿನ ಭೂಸ್ವಾಧೀನಾಧಿಕಾರಿಗಳು, ಬೆಳಗಾವಿ, 3) ಗ್ರಾಮ ಲೆಕ್ಕಾಧಿಕಾರಿ, ಮಣಗುತ್ತಿ ಗ್ರಾಮ, ಹುಕ್ಕೇರಿ ತಾಲೂಕು ಬೆಳಗಾವಿ ಜಿಲ್ಲೆ, 4) ಶ್ರೀ ಸಂಜು ಬಾಳಪ್ಪ ಮಂಡಲಿ, ಹಿಂದಿನ ಗ್ರಾಮ ಲೆಕ್ಕಾಧಿಕಾರಿ, ಮಣಗುತ್ತಿ ಗ್ರಾಮ, ಹುಕ್ಕೇರಿ ತಾಲೂಕು, ಬೆಳಗಾವಿ ಜಿಲ್ಲೆ, 5) ಶ್ರೀ ಆರ್.ಎಂ ಗಸ್ತಿ, ವಿಶೇಷ ಭೂ ಸ್ವಾಧೀನಾಧಿಕಾರಿಗಳು, ಹಿಡಕಲ್ ಡ್ಯಾಂ, ಬೆಳಗಾವಿ ಜಿಲ್ಲೆ, (2 ರಿಂದ 5ನೇ ಎದುರುದಾರರನ್ನು ವಿಚಾರಣೆ ಕಾಲಕ್ಕೆ ಸೇರ್ಪಡೆಗೊಳಿಸಲಾಗಿದೆ). (ಇನ್ನು ಮುಂದೆ ಕ್ರಮವಾಗಿ 1 ರಿಂದ 5ನೇ ಎದುರುದಾರರೆಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿರುತ್ತಾರೆ.

## 2. ದೂರಿನ ಸಾರಾಂಶ:-

ದೂರುದಾರರು ತಮ್ಮ ದೂರಿನಲ್ಲಿ ತಾವು ತಮ್ಮ ತಂದೆಗೆ 5 ಗಂಡು ಮಕ್ಕಳು ಹಾಗೂ ಇಬ್ಬರು ಹೆಣ್ಣುಮಕ್ಕಳು ಸರಳವಾರಸುದಾರರಿರುತ್ತೇವೆ. ತಮ್ಮ ತಂದೆಯಾದ ಮೃತ ಮಹಾಲಿಂಗಪ್ಪ ರವರ ಹೆಸರಿನಲ್ಲಿ ಮಾಸ್ತಿಹೋಳಿ ಗ್ರಾಮದ ಸರ್ವೆ ನಂ.88 ರಲ್ಲಿ 5 ಎಕರೆ 1 ಗುಂಟೆ ಜಮೀನು ಹೊಂದಿದ್ದು, ಜಮೀನಿನ ಮಾಲೀಕರು ಸ್ವಾಧೀನಾನುಭವ ಹೊಂದಿದವರಾಗಿರುತ್ತಾರೆ. ತಮ್ಮ ತಂದೆ ದಿ: 06/03/1999 ರಂದು ಮೃತಪಟ್ಟಿರುತ್ತಾರೆ. ತನ್ನ ತಂದೆಗೆ 7 ಜನ ಉತ್ತರಜೀವಿತರು ಇರುವುದಾಗಿ ಉಪತಹಶೀಲ್ದಾರರು, ಯಮಕನಮರಡಿ ಇವರು ಕುಟುಂಬದ ಜೀವಂತ ಸದಸ್ಯರ ದೃಢೀಕರಣ ಪತ್ರ ನೀಡಿರುತ್ತಾರೆ.

3. ತನ್ನ ಸಹೋದರನಾದ ಸುಭಾಷಚಂದ್ರ ಮಹಾಲಿಂಗಪ್ಪ ಪಾಟೀಲ್ ಈತನು ತನ್ನ ಸ್ವಂತಕ್ಕೆ ಲಾಭ ಮಾಡಿಕೊಳ್ಳುವ ದುರುದ್ದೇಶದಿಂದ ದಿ: 15/10/2010 ರಂದು ತನ್ನ ತಂದೆಗೆ ತಾನೊಬ್ಬನೇ ವಾರಸುದಾರರಾಗಿರುವುದಾಗಿ ಗ್ರಾಮ ಲೆಕ್ಕಿಗನೊಂದಿಗೆ ಶಾಮೀಲಾಗಿ, ಕೃತಕ ದಾಖಲೆಯನ್ನು ತಯಾರಿಸಿ ಮಾಸ್ತಿಹೊಳಿ ಗ್ರಾಮದ ಸರ್ವೆ ನಂ.88 ಕ್ಕೆ ತನ್ನೊಬ್ಬನ ಹೆಸರನ್ನಷ್ಟೆ ದಾಖಲಿಸಲು ಅರ್ಜಿ ಸಲ್ಲಿಸಿದ್ದರ ಮೇರೆಗೆ ಕಂದಾಯ ಅಧಿಕಾರಿಗಳು ಯಾವುದೇ ವಿಚಾರಣೆ ಕೈಗೊಳ್ಳದೇ ತನ್ನ ಸಹೋದರನೊಂದಿಗೆ ಶಾಮೀಲಾಗಿ ತನ್ನ ತಂದೆ ಹೆಸರನ್ನು ಆರ್.ಟಿ.ಸಿ ಯಲ್ಲಿ ಕಾಲಂ 9 ಮತ್ತು 12 ರಿಂದ ಕಡಿಮೆ ಮಾಡಿಸಿ ತನ್ನ ಹೆಸರನ್ನು ದಾಖಲಿಸಲು ಕಂದಾಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ದಾಖಲಿಸಿಕೊಂಡಿರುತ್ತಾನೆ.

4. ಮಾಸ್ತಿಹೊಳಿ ಗ್ರಾಮದ ರಿ.ಸ.ನಂ. 88 ತಮ್ಮ ಜಮೀನನ್ನು ಸರ್ಕಾರ ಹಿಡ್‌ಕಲ್ ಜಲಾಶಯಕ್ಕಾಗಿ ಭೂ ಸ್ವಾಧೀನ ಪಡಿಸಿಕೊಂಡಿದ್ದು, ಭೂ ಸ್ವಾಧೀನಾಧಿಕಾರಿಗಳು ಸೂಕ್ತ ತನಿಖೆ ಮಾಡದೆ ವಾರಸುದಾರರು ಯಾರು ಎಂಬುದನ್ನು ಖಚಿತಪಡಿಸಿಕೊಳ್ಳದೇ ತನ್ನ

ಸಹೋದರ ಕಂದಾಯ ಇಲಾಖೆಯ ಪಹಣಿಯಲ್ಲಿ ದಾಖಲಿಸಿಕೊಂಡಿದ್ದ ಹೆಸರನ್ನಷ್ಟೇ ಪರಿಗಣಿಸಿ, ವಿಶೇಷ ಭೂ ಸ್ವಾಧೀನಾಧಿಕಾರಿಗಳು ಭೂ ಸ್ವಾಧೀನಪಡಿಸಿಕೊಂಡ ಜಮೀನಿಗೆ ಪರಿಹಾರ ಧನವನ್ನು ಬಿಡುಗಡೆ ಮಾಡಲು ತಯಾರಿ ನಡೆಸಿದ್ದ ವಿಷಯವನ್ನು ತಿಳಿದ ತಾನು ದಿ: 29/01/2016 ರಂದು ವಿಶೇಷ ಭೂ ಸ್ವಾಧೀನಾಧಿಕಾರಿಗಳು, ಘಟಪ್ರಭಾ ಜಲಾಶಯ, ಹಿಡಕಲ್ ಡ್ಯಾಂ, ಹುಕ್ಕೇರಿ ತಾಲ್ಲೂಕು ರವರಿಗೆ ಪರಿಹಾರಧನವನ್ನು ಬಿಡುಗಡೆ ಮಾಡದಂತೆ ಕೋರಿ ಲಿಖಿತ ಆಕ್ಷೇಪಣೆಯನ್ನು ಸಲ್ಲಿಸಿದ್ದು, ವಿಶೇಷ ಭೂ ಸ್ವಾಧೀನಾಧಿಕಾರಿಗಳು ತನ್ನ ತಕರಾರು ಅರ್ಜಿಯನ್ನು ಪಡೆದುಕೊಂಡ ನಂತರ ದಿ: 28/01/2016 ರಂದು ಹಿಂದಿನ ದಿನವೇ ಚೆಕ್‌ನ್ನು ವಿತರಣೆ ಮಾಡಿದಂತೆ ನಮೂದಿಸಿ ದಿ: 30/01/2016 ರಂದು ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್ ಹುಕ್ಕೇರಿ ಖಾತೆಯಿಂದ ತನ್ನ ಸಹೋದರನ ಡಿ.ಸಿ.ಸಿ ಬ್ಯಾಂಕ್ ಗೋಕಾಕ್ ಶಾಖೆಯ ಖಾತೆಗೆ ಹಣ ಜಮಾ ಮಾಡಿರುತ್ತಾರೆ.

5. ವಿಶೇಷ ಭೂಸ್ವಾಧೀನಾಧಿಕಾರಿಗಳು ತಾನು ನೀಡಿದ ತಕರಾರು ಅರ್ಜಿಯನ್ನು ಪರಿಗಣಿಸದೇ ತರಾತುರಿಯಲ್ಲಿ ಹಿಂದಿನ ದಿನಾಂಕವನ್ನು ನಮೂದಿಸಿ ತನ್ನ ಸಹೋದರನೊಂದಿಗೆ ಶಾಮೀಲಾಗಿ ಸದರಿ ಭೂ ಸ್ವಾಧೀನದ ಹಣವನ್ನು ಬಿಡುಗಡೆಗೊಳಿಸಿರುತ್ತಾರೆ.

6. ಆದ್ದರಿಂದ, ತನ್ನ ತಂದೆಗೆ 7 ಜನ ವಾರಸುದಾರರಿದ್ದು, ತನ್ನ ಸಹೋದರನ ಹೆಸರಿಗೆ ವಿಶೇಷ ಭೂ ಸ್ವಾಧೀನಾಧಿಕಾರಿಗಳು, ಯಾವುದೇ ವಿಚಾರಣೆಯನ್ನು ನಡೆಸದೇ, ಕಾನೂನಾತ್ಮಕವಾಗಿ ಪರಿಹಾರಧನವನ್ನು ಎಲ್ಲಾ ವಾರಸುದಾರರಿಗೆ ಸರಿಸಮವಾಗಿ ವಿತರಿಸದೇ, ತನ್ನ ಸಹೋದರನೊಂದಿಗೆ ಶಾಮೀಲಾಗಿ, ತನ್ನ ಸಹೋದರನಿಗೆ ಅನುಕೂಲ ಕಲ್ಪಿಸಿಕೊಡುವ ಉದ್ದೇಶದಿಂದ, ಕಂದಾಯ ಅಧಿಕಾರಿಗಳು ಸೃಷ್ಟಿಸಿದ ಕೊಟ್ಟಿ ದಾಖಲೆಗಳನ್ನು ಪರಿಗಣಿಸಿ, ವಿಚಾರಣೆ ಮಾಡದೇ ಹಣವಿತರಣೆ ಮಾಡಿರುವುದರಿಂದ ವಿಶೇಷ ಭೂ ಸ್ವಾಧೀನಾಧಿಕಾರಿಯ ವಿರುದ್ಧ ಸೂಕ್ತ ಕ್ರಮ ಜರುಗಿಸಬೇಕೆಂದು ಹಾಗೂ ತನ್ನ ಸಹೋದರನಿಗೆ ವಿತರಣೆ ಮಾಡಿದ

ಹಣವನ್ನು ಹಿಂಪಡೆದು ಎಲ್ಲಾ ವಾರಸುದಾರರಿಗೆ ಸೂಕ್ತವಾಗಿ ವಿತರಣೆ ಮಾಡಲು ಸೂಕ್ತ ಆದೇಶ ಹೊರಡಿಸಬೇಕೆಂದು ಕೋರಿ ಸದರಿ ದೂರನ್ನು ಸಲ್ಲಿಸಿರುತ್ತಾರೆ.

7. **ವಿಶೇಷ ಭೂ ಸ್ವಾಧೀನಾಧಿಕಾರಿಗಳು, ಹಿಡಕಲ್ ಡ್ಯಾಂ ರವರಿಂದ ಆಕ್ಷೇಪಣೆ ಸ್ವೀಕರಿಸಿದ್ದು,** ತಮ್ಮ ಆಕ್ಷೇಪಣೆಯಲ್ಲಿ 2016 ಜನವರಿ ತಿಂಗಳಲ್ಲಿ ಶ್ರೀಮತಿ. ರಾಜಶ್ರೀ ಜೈನಾಪುರೆ ರವರು ವಿಶೇಷ ಭೂ ಸ್ವಾಧೀನಾಧಿಕಾರಿ ಎಂದು ಕಾರ್ಯನಿರ್ವಹಿಸಿದ್ದು ಇರುತ್ತದೆ. ಸದ್ಯ ಕರ್ನಾಟಕ ವಿಜ್ಞಾನ ಸಂಸ್ಥೆ (ಕಿಮ್ಸ್) ಹುಬ್ಬಳ್ಳಿ, ಧಾರವಾಡದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಸದರಿಯವರ ಅವಧಿಯಲ್ಲಿ ಶಿವನಗೌಡ ಮಹಾಲಿಂಗಪ್ಪ ಪಾಟೀಲ್ ಇವರ ಮಾಸ್ತಿ ಹೊಳಿ ಗ್ರಾಮದ ಸರ್ವೆ ನಂ.88 ಕ್ಷೇತ್ರ 5 ಎಕರೆ 1 ಗುಂಟೆ ಜಮೀನಿಗೆ ಸಂಬಂಧಿಸಿಂತೆ, ಸುಭಾಶ್ಚಂದ್ರ ಮಹಾಲಿಂಗಪ್ಪ ಪಾಟೀಲ್ ಇವರ ಹೆಸರು ಪಹಣಿ ಪತ್ರಿಕೆಯಲ್ಲಿ ದಾಖಲಿದ್ದಂತೆ ಸದರಿ ಜಮೀನು ಭೂ ಸ್ವಾಧೀನಪಡಿಸಿಕೊಂಡಿದ್ದರಿಂದ ಪರಿಹಾರ ಧನವನ್ನು ಪಹಣಿ ಪತ್ರಿಕೆಯಲ್ಲಿದ್ದಂತೆ ಭೂ ಮಾಲೀಕರಿಗೆ ಸಂದಾಯ ಮಾಡಿರುತ್ತಾರೆ.

8. ಪ್ರಕರಣದಲ್ಲಿ ಸದರಿ ದೂರುದಾರರು ಸಿವಿಲ್ ನ್ಯಾಯಾಲಯ ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ ಸಂಕೇಶ್ವರದಲ್ಲಿ ಸಿ.ಸಿ. ನಂ.1323/2017 ದಿ:18/08/2017 ರಲ್ಲಿ ಪ್ರಕರಣದ ದಾಖಲಿಸಿದ್ದರಿಂದ ವಿಚಾರಣೆ ಹಂತದಲ್ಲಿರುತ್ತದೆ. ಪ್ರಕರಣದಲ್ಲಿ ನಮ್ಮ ಕಾರ್ಯಾಲಯದಿಂದ ಯಾವುದೇ ಕ್ರಮ ಜರುಗಿಸಲು ಬಾರದೇ ಇರುವುದರಿಂದ ಕಾರ್ಯಾಲಯಕ್ಕೆ ಸಲ್ಲಿಸಿದ ದೂರು ಅರ್ಜಿಯಮೇರೆಗೆ ಉಭಯ ಪಕ್ಷಗಾರರಿಗೆ ದಿ:19/01/2021 ರಂದು ತಿಳುವಳಿಕೆ ಪತ್ರ ನೀಡಿ ನ್ಯಾಯಾಲಯದ ತೀರ್ಪಿಗೆ ಬದ್ಧರಾಗುವಂತೆ ಉಭಯ ಪಕ್ಷಗಾರರಿಗೆ ತಿಳಿಸಿ ಪ್ರಕರಣ ಇತ್ಯರ್ಥ ಮಾಡಲಾಗಿದೆ ಎಂಬಂತೆ ನಮೂದಿಸಿ ಆಕ್ಷೇಪಣೆ ಸಲ್ಲಿಸಿರುತ್ತಾರೆ.

9. 2ನೇ ಎದುರುದಾರರಿಂದ ದಿ:22/04/2022 ರಂದು **ಆಕ್ಷೇಪಣೆಯನ್ನು ಸ್ವೀಕರಿಸಿದ್ದು,** ತಮ್ಮ ಆಕ್ಷೇಪಣೆಯಲ್ಲಿ ಹುಕ್ಕೇರಿ ತಾಲ್ಲೂಕಿನ ಯಮಕನ ಮರಡಿ ಹೋಬಳಿಯ ಮಾಸ್ತಿಹೊಳೆ ಗ್ರಾಮದ ಸರ್ವೆ ನಂ.88 ರ ಕ್ಷೇತ್ರ 5 ಎಕರೆ 1 ಗುಂಟೆ ಭೂ ಸ್ವಾಧೀನವಾದ ಜಮೀನಿಗೆ ಪರಿಹಾರಧನದ ಮೊತ್ತವನ್ನು ನೀಡುವ ಪೂರ್ವದಲ್ಲಿ ಈ ಕೆಳಕಂಡಂತೆ ಪರಿಶೀಲಿಸಿ ಪರಿಹಾರಧನವನ್ನು ನೀಡಿದ್ದು ಇರುತ್ತದೆ.

1. ಐ–ತೀರ್ಪಿನ ಸಂಖ್ಯೆ:ಎಲ್ಎಕ್ಯೂ/ಎಸ್ಆರ್/1/2013–14 ದಿ:27/07/2015 ರನ್ವಯ ಭೂ ಸ್ವಾಧೀನವಾಗಿದ್ದು ಇರುತ್ತದೆ.

2. ಹಿಂದಿನ ವಿಶೇಷ ಭೂ ಸ್ವಾಧೀನಾಧಿಕಾರಿಗಳಾದ ಆರ್.ಎ.ಘಸ್ತಿ ಇವರು ಸದರಿ ಜಮೀನನ್ನು ಭೂ ಸ್ವಾಧೀನಪಡಿಸಿಕೊಂಡಿದ್ದು ಇರುತ್ತದೆ.

3. ಗ್ರಾಮ ಲೆಕ್ಕಾಧಿಕಾರಿ, ಮಣಗತ್ತಿ ಇವರು ದಿ:21/12/2009 ರಂದು ಮಾನಿಂಗಪ್ಪ, ಅಣ್ಣಪ್ಪ ಪಾಟೀಲ್ ಇವರ ಉತ್ತರ ಜೀವಿತ ಪ್ರಮಾಣ ಪತ್ರವನ್ನು ನೀಡಿರುತ್ತಾರೆ.

4. ಉತ್ತರ ಜೀವಿತ ಪ್ರಮಾಣ ಪತ್ರದಲ್ಲಿ ಸುಭಾಷ್ಚಂದ್ರ ಮಾನಿಂಗಪ್ಪ ಪಾಟೀಲ್ ಇವರು ಮಾತ್ರ ಏಕೈಕ ವಾರಸುದಾರರಾಗಿರುತ್ತಾರೆ.

5. ಉತ್ತರ ಜೀವಿತ ಪ್ರಮಾಣ ಪತ್ರದನ್ವಯ ಮಾಸ್ತಿ ಹೊಳ ಗ್ರಾಮದ ಸರ್ವೆ ನಂ.88 ರ ಕ್ಷೇತ್ರ 5 ಎಕರೆ 1 ಗುಂಟೆ ಜಮೀನಿನ ಪಹಣಿ ಪತ್ರಿಕೆಯ ಕಾಲಂ ನಂ.9 ರಲ್ಲಿ ಸುಭಾಷ್ಚಂದ್ರ ಪಾಟೀಲ್ ಇವರ ಹೆಸರು ಹಕ್ಕುದಾಖಲೆ ದಿ:15/01/2010 ರನ್ವಯ ದಾಖಲಿಸಿರುವುದು ಕಂಡುಬರುತ್ತದೆ.

6. ಹಕ್ಕು ದಾಖಲೆ ಅನ್ವಯ ಸುಭಾಷ್ಚಂದ್ರ ಪಾಟೀಲ್ ಇವರ ಹೆಸರು ಪಹಣಿ ಪತ್ರಿಕೆಯ ಕಾಲಂ.9 ರಲ್ಲಿ ದಾಖಲಿಸಿದ ನಂತರ ಪರಿಹಾರ ಮೊತ್ತವನ್ನು ವಿತರಣೆ ಮಾಡುವವರೆಗೆ ಸುಮಾರು 6 ವರ್ಷಗಳ ಕಾಲ ಯಾರೂ ಯಾವುದೇ ರೀತಿಯ ತಕರಾರನ್ನು ಸಲ್ಲಿಸಿರುವುದು ಕಂಡುಬರುವುದಿಲ್ಲ.

7. ಹಕ್ಕು ದಾಖಲೆ ಹಾಗೂ ಪಹಣಿ ಪತ್ರಿಕೆಯಲ್ಲಿಯ ಮತ್ತು ಗ್ರಾಮ ಲೆಕ್ಕಾಧಿಕಾರಿ ನೀಡಿದ ಉತ್ತರ ಜೀವಿತ ಪ್ರಮಾಣ ಪತ್ರದ ಆಧಾರದ ಮೇರೆಗೆ ಸದರಿ ಜಮೀನನ್ನು ಭೂ ಸ್ವಾಧೀನಪಡಿಸಿಕೊಂಡು ದಿ:27/07/2015 ರಂದು ಅವಾರ್ಡ್ ಮಾಡಿ ಸ್ವಾಧೀನಕ್ಕೆ ಪಡೆಯಲಾಗಿದೆ.

8. ಭೂ ಸ್ವಾಧೀನಪಡಿಸಿಕೊಂಡ ದಿ:27/07/2015 ರಂದು ಪರಿಹಾರ ಮೊತ್ತ ರೂ. 1,04,71,394/-ಗಳನ್ನು ನಿಗದಿಪಡಿಸಿದ್ದು ಇರುತ್ತದೆ.

9. ಪರಿಹಾರ ಮೊತ್ತವನ್ನು ನೀಡುವ ಬಗ್ಗೆ ಸರ್ಕಾರದಿಂದ ಅನುದಾನ ಬಿಡುಗಡೆಗೊಂಡಿದ್ದು, ಅದರನ್ವಯ ಆಯುಕ್ತರು, ಪುನರ್ವಸತಿ, ಪುನರ್‌ನಿರ್ಮಾಣ ಹಾಗೂ ಭೂ ಸ್ವಾಧೀನ ಪದನಿಮಿತ್ತ ಸರ್ಕಾರದ ಕಾರ್ಯದರ್ಶಿಗಳು, ಕೃಷ್ಣಾ ಮೇಲ್ದಂಡೆ ಯೋಜನೆ, ಬಾಗಲಕೋಟೆ ಇವರು ಸದರಿ ಭೂ ಸ್ವಾಧೀನದ ಜಮೀನಿಗೆ ತಕ್ಷಣ ಪರಿಹಾರ ಮೊತ್ತವನ್ನು ಬಿಡುಗಡೆಗೊಳಿಸಲು ಆದೇಶಿಸಿದ್ದು ಇರುತ್ತದೆ.

10. ಆಯುಕ್ತರು ದಿ:01/08/2015 ರ ಪತ್ರದನ್ವಯ ಜಮೀನಿಗೆ ನಿಗದಿಪಡಿಸಿದ ಪರಿಹಾರ ಮೊತ್ತವನ್ನು ನೀಡಲು ಅನುಮತಿಸಿದ್ದರಿಂದ ದಿ:28/01/2016 ರಂದು ಪರಿಹಾರ ಮೊತ್ತವನ್ನು ಚೆಕ್ ಮೂಲಕ ನೀಡಲಾಗಿರುತ್ತದೆ.

11. ದಿ:15/01/2010 ರಿಂದ ದಿ:28/01/2016 ರವರೆಗೆ ಭೂ ಸ್ವಾಧೀನಪಡಿಸಿಕೊಂಡ ಬಗ್ಗೆ ಮತ್ತು ಪರಿಹಾರ ಮೊತ್ತ ವಿತರಿಸಿದ ಬಗ್ಗೆ ಯಾವುದೇ ತಕರಾರು ಅರ್ಜಿಗಳು ಕಛೇರಿಯಲ್ಲಿ ಸ್ವೀಕೃತವಾಗಿರುವುದಿಲ್ಲ.

12. ಪರಿಹಾರ ಮೊತ್ತವನ್ನು ಪಾವತಿಸಿದ ನಂತರ ದಿ:29/01/2016 ರಂದು ಮೃತ ಮಾನಿಂಗಪ್ಪ ಪಾಟೀಲ್ ಇವರ ಹೊಸದಾದ ಉತ್ತರ ಜೀವಿತ ಪ್ರಮಾಣ ಪತ್ರವನ್ನು

ಟಪಾಲು ಸ್ವೀಕೃತಿ ವಿಭಾಗದಲ್ಲಿ ತಕರಾರು ಅರ್ಜಿಯೊಂದಿಗೆ ನೀಡಿದ್ದು ಇರುತ್ತದೆ.

10. ಈ ಮೇಲ್ಕಾಣಿಸಿದ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ತಾನು ವಿಶೇಷ ಭೂ ಸ್ವಾಧೀನಾಧಿಕಾರಿ, ಹಿಡಕಲ್‌ಡ್ಯಾಂ ಎಂದು ಕಾರ್ಯನಿರ್ವಹಿಸಿದ ಸಮಯದಲ್ಲಿ ಹುಕ್ಕೇರಿ ತಾಲ್ಲೂಕಿನ ಯಮಕನಮರಡಿ ಹೋಬಳಯ ಮಾಸ್ತಿಹೊಳೆ ಗ್ರಾಮದ ಸರ್ವೆ ನಂ.88 ರ ಕ್ಷೇತ್ರ 5 ಎಕರೆ 1 ಗುಂಟೆ ಜಮೀನಿಗೆ ಜಮೀನಿನ ಪಹಣಿ ಪತ್ರಿಕೆ, ಹಕ್ಕುದಾಖಲೆ, ಗ್ರಾಮ ಲೆಕ್ಕಾಧಿಕಾರಿ ನೀಡಿದ ಜೀವಿತ ವಾರಸಾ ಪ್ರಮಾಣ ಪತ್ರ, ಮಾನ್ಯ ಆಯುಕ್ತರ ದಿ:01/08/2015 ರ ಪತ್ರದನ್ವಯ ಜಮೀನಿಗೆ ನಿಗದಿಪಡಿಸಿದ ಪರಿಹಾರ ಮೊತ್ತವನ್ನು ದಿ:28/01/2016 ರಂದು ವಿತರಣೆ ಮಾಡಿದ್ದು, ತನ್ನ ಕಾರ್ಯದಲ್ಲಿ ಯಾವುದೇ ಕರ್ತವ್ಯಲೋಪ ಉಂಟಾಗಿರುವುದಿಲ್ಲ ಎಂಬಂತೆ ನಮೂದಿಸಿ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ.

11. **3ನೇ ಎದುರುದಾರರಿಂದ ದಿ:22/04/2022 ರಂದು ಆಕ್ಷೇಪಣೆಯನ್ನು ಸ್ವೀಕರಿಸಿದ್ದು,** ತಮ್ಮ ಆಕ್ಷೇಪಣೆಯಲ್ಲಿ ಮಾಸ್ತಿಹೊಳೆ ಗ್ರಾಮದ ಸರ್ವೆ ನಂ.88, ಕ್ಷೇತ್ರ 5 ಎಕರೆ 1 ಗುಂಟೆ ಜಮೀನು ಹಿಡಕಲ್ ಜಲಾಶಯಕ್ಕಾಗಿ ಭೂ ಸ್ವಾಧೀನಗೊಂಡಿದ್ದು, ಜಮೀನಿನ ಮಾಲೀಕರಿಗೆ ಪರಿಹಾರಧನ ವಿತರಿಸಲಾಗಿರುತ್ತದೆ.

12. ಈ ಮೊದಲು ಗ್ರಾಮ ಲೆಕ್ಕಾಧಿಕಾರಿ, ಮಣಗುತ್ತಿ ಎಂದು ಕಾರ್ಯನಿರ್ವಹಿಸುತ್ತಿದ್ದ ಗ್ರಾಮ ಲೆಕ್ಕಾಧಿಕಾರಿಯು ಯಾವ ಆಧಾರದ ಮೇಲೆ ಸುಭಾಷ್ಚಂದ್ರ ಪಾಟೀಲ್ ಇವರಿಗೆ ಉತ್ತರ ಜೀವಿತ ಪ್ರಮಾಣ ಪತ್ರ ನೀಡಿರುತ್ತಾರೆನ್ನುವುದು ಸ್ಪಷ್ಟವಾಗಿ ಕಂಡುಬರುವುದಿಲ್ಲ. ಪ್ರಮಾಣ ಪತ್ರವನ್ನು ದಿ:21/12/2009 ರಂದು ನೀಡಿದ್ದು, ಆಗ ತಾನು ಮಣಗುತ್ತಿ ಗ್ರಾಮಲೆಕ್ಕಾಧಿಕಾರಿ ಎಂದು ಕಾರ್ಯನಿರ್ವಹಿಸುತ್ತಿರಲಿಲ್ಲ. ಮಣಗುತ್ತಿ ಗ್ರಾಮ ಗ್ರಾಮ ಲೆಕ್ಕಾಧಿಕಾರಿ ಎಂದು ದಿ:18/03/2020 ರಿಂದ ಕಾರ್ಯನಿರ್ವಹಿಸುತ್ತಿದ್ದೇನೆ. 2009

ರಲ್ಲಿ ಮಣಗುತ್ತಿ ಗ್ರಾಮದ ಗ್ರಾಮಲೆಕ್ಕಾಧಿಕಾರಿ ಎಂದು ಕಾರ್ಯನಿರ್ವಹಿಸಿದ ಗ್ರಾಮ ಲೆಕ್ಕಿಗರು ಸದರಿ ಪ್ರಮಾಣಪತ್ರವನ್ನು ನೀಡಿರುತ್ತಾರೆ ಎಂಬಂತೆ ನಮೂದಿಸಿ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ.

13. 4ನೇ ಎದುರುದಾರರು ದಿ: 21/06/2022 ರ ಆಕ್ಷೇಪಣೆಯನ್ನು ಸಲ್ಲಿಸಿದ್ದು, ತಮ್ಮ ಆಕ್ಷೇಪಣೆಯಲ್ಲಿ ತಾನು 2007 ರಿಂದ 2009 ರವರೆಗೆ ಗ್ರಾಮಲೆಕ್ಕಾಧಿಕಾರಿ, ಮಣಗುತ್ತಿ ಎಂದು ಕಾರ್ಯನಿರ್ವಹಿಸುತ್ತಿದ್ದಾಗ ದೂರುದಾರರ ಸಹೋದರರಾದ ಶ್ರೀ. ಸುಭಾಷಚಂದ್ರ ಮಹಾಲಿಂಗಪ್ಪ ಪಾಟೀಲ ಇವರು ಉತ್ತರ ಜೀವಿತರ ಪ್ರಮಾಣ ಪತ್ರ ಬೇಡಿ ಅರ್ಜಿ ಸಲ್ಲಿಸಿದ್ದು, ಆ ಸಮಯದಲ್ಲಿ ಹಾಜರು ಪಡಿಸಿದ ದಾಖಲೆಗಳನ್ನು ಪರಿಶೀಲಿಸಿ ಪ್ರಮಾಣ ಪತ್ರ ಮತ್ತು ಗ್ರಾಮದ ವ್ಯಾಪ್ತಿಯ ಗೌರವಸ್ತ ವ್ಯಕ್ತಿಗಳ ಪಂಚನಾಮೆಯನ್ನು ಸೂಕ್ತ ವಿಚಾರಣೆ ಮಾಡಿ ಆತನ ಬೇಡಿಕೆ ಮೇರೆಗೆ ಲಭ್ಯವಿರುವ ದಾಖಲೆಗಳ ಮೇರೆಗೆ ಅವರಿಗೆ ಉತ್ತರ ಜೀವಿತರ ಪ್ರಮಾಣ ಪತ್ರ ನೀಡಿದ್ದು (ಕೈಬರಹದಲ್ಲಿ), ಸದರಿ ಕೈಬರಹದ ವಾರಸ ಪ್ರಮಾಣ ಪತ್ರವನ್ನು ಸ್ವೀಕರಿಸುವ ವ ತಳ್ಳಿಹಾಕುವ ಅಧಿಕಾರ ತಹಶೀಲ್ದಾರರಿಗೆ ಇರುತ್ತದೆ. ಉತ್ತರ ಜೀವಿತ ಪ್ರಮಾಣ ಪತ್ರದ ಮೇಲೆ ತಹಶೀಲ್ದಾರ್, ಹುಕ್ಕೇರಿ ರವರು ಗಣಕಯಂತ್ರದ ಪ್ರಮಾಣ ಪತ್ರ ನೀಡಿರುವುದು ತಿಳಿದು ಬಂದಿರುತ್ತದೆ. ತಾನು ನೀಡಿದ ದಾಖಲೆಯು ಅಂತಿಮ ದಾಖಲೆಯಾಗಿರದೇ ಉತ್ತರ ಜೀವಿತರ ಪ್ರಮಾಣ ಪತ್ರದ ದಾಖಲೆಯನ್ನು ತಹಶೀಲ್ದಾರರಿಂದ ಪಡೆದುಕೊಂಡ ನಂತರ ಪಹಣಿ ಪತ್ರಿಕೆಗೆ ಹೆಸರು ದಾಖಲಿಸಲು ಕೊಡಬೇಕಾಗುತ್ತದೆ. ತಾನು ಸುಭಾಷಚಂದ್ರ ಪಾಟೀಲ, ಇವರು ಅರ್ಜಿ ಸಲ್ಲಿಸಿದ ನಂತರ 2009 ರಲ್ಲಿ ದಾಖಲೆಯನ್ನು ನೀಡಿದ್ದು, ಆನಂತರ 2010 ರಲ್ಲಿ ತಾನು ವರ್ಗಾವಣೆಯಾಗಿರುತ್ತೇನೆ. ಉತ್ತರ ಜೀವಿತ ಪ್ರಮಾಣ ಪತ್ರವನ್ನು ಪಡೆದುಕೊಂಡ ದಾಖಲೆಗಳನ್ನು ಒಂದು ವರ್ಷದ ತರುವಾಯ ತಹಶೀಲ್ದಾರ್ ಕಾರ್ಯಾಲಯದ ದಾಖಲೆ ವಿಭಾಗಕ್ಕೆ ಕಳುಹಿಸಿರುತ್ತಾರೆ.

14. ದಿ: 15/01/2010 ರಂದು ತಹಶೀಲ್ದಾರರಿಗೆ ಸುಭಾಷಚಂದ್ರ ಪಾಟೀಲ ಇವರು ಅರ್ಜಿ ಸಲ್ಲಿಸಿ, ತಾನೊಬ್ಬನೇ ಮೃತ ಮಹಲಿಂಗಪ್ಪನ ವಾರಸಾ ಎಂದು ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಯನ್ನು ಪರಿಶೀಲಿಸಿ ದಾಖಲಿಸಲಾಗಿರುತ್ತದೆ. ಅರ್ಜಿಗೆ ಸಂಬಂಧಿಸಿದಂತೆ ಪಹಣಿಯಲ್ಲಿ ಹೆಸರನ್ನು ದಾಖಲಿಸಬೇಕಿದ್ದು, ತಹಶೀಲ್ದಾರ್, ಹುಕ್ಕೇರಿ ಇವರ ಕಾರ್ಯಾಲಯದಿಂದ ಪಹಣಿ ಪತ್ರಿಕೆಗೆ ಹೆಸರು ದಾಖಲಾದ ಕೂಡಲೇ ಭೂಸ್ವಾಧೀನದ ಪರಿಹಾರ ಹಣ ಪಡೆಯಲು ಅರ್ಜಿಯನ್ನು ಸಲ್ಲಿಸದೇ 2015-16 ರಲ್ಲಿ ಅರ್ಜಿ ಸಲ್ಲಿಸಿರುವುದು ಕಂಡುಬರುತ್ತದೆ.

15. ದೂರುದಾರರ ತಂದೆ 1999 ರಲ್ಲಿ ಮೃತಪಟ್ಟಿದ್ದು, ಅವರ ತಾಯಿ 2005 ರಲ್ಲಿ ಮೃತಪಟ್ಟಿದ್ದು, ಹಲವಾರು ವಾರಸುದಾರರು ಇರುವುದಾಗಿ ಅರ್ಜಿ ಸಲ್ಲಿಸಿದ್ದು, ಆದರೆ 17 ವರ್ಷದವರೆಗೆ ಹೆಸರನ್ನು ದಾಖಲಿಸಿಕೊಳ್ಳಲು ಯಾವುದೇ ಕ್ರಮ ವಹಿಸಿರುವುದಿಲ್ಲ. ಸುಭಾಷಚಂದ್ರ ಪಾಟೀಲ ಇವರು ಭೂಸ್ವಾಧೀನಾಧಿಕಾರಿಗಳಿಗೆ ಅರ್ಜಿ ಸಲ್ಲಿಸಿದ ನಂತರ ಹಣ ಕೊಡುವ ಮೊದಲು ಭೂಸ್ವಾಧೀನಾಧಿಕಾರಿಗಳು ಹೊಸದಾದ ವಾರಸಾ ಪ್ರಮಾಣ ಪತ್ರ ಮತ್ತು ಮುಚ್ಚಳಿಕೆ ಪತ್ರ ವಗ್ಯೆರೆ ಪಡೆದುಕೊಂಡು ಪರಿಹಾರದ ಹಣ ಬಿಡುಗಡೆ ಮಾಡಬೇಕಾಗಿರುತ್ತದೆ. ಹಣ ನೀಡುವ ಸಮಯದಲ್ಲಿ ಯಾವುದೇ ನಿಯಮವನ್ನು ಪಾಲಿಸಿರುವುದಿಲ್ಲ.

16. ದೂರುದಾರರು ದಿ: 28/01/2016 ರಂದು ಹಣ ಸಂದಾಯ ಮಾಡಲು ವಿಶೇಷ ಭೂಸ್ವಾಧೀನಾಧಿಕಾರಿಗಳು ಪತ್ರ ಬರೆದ ನಂತರ ದಿ: 29/01/2016 ರಂದು ತಕರಾರು ನೀಡಿದ್ದು, ಭೂಸ್ವಾಧೀನಾಧಿಕಾರಿಗಳು ಸದರಿ ತಕರಾರನ್ನು ಪರಿಗಣಿಸದೇ ಹೋಗಿದ್ದರಿಂದ ನ್ಯಾಯಾಲಯದಲ್ಲಿ ದೂರು ದಾಖಲಾಗಿರುವುದು ತಿಳಿದುಬಂದಿರುತ್ತದೆ.

17. ದೂರನ್ನು ಸಲ್ಲಿಸಿದ ನಂತರ ತನಿಖಾಧಿಕಾರಿಗಳು ವಿಚಾರಣೆಗೆ ಯಮಕನಮರಡಿ ಠಾಣಾಧಿಕಾರಿಗೆ ಕಳುಹಿಸಿದ್ದು, ತಹಶೀಲ್ದಾರ, ಹುಕ್ಕೇರಿ, ಕಂದಾಯ ನಿರೀಕ್ಷಕರು ಮತ್ತು ವಿಶೇಷ ಭೂಸ್ವಾಧೀನಾಧಿಕಾರಿಗಳ ವಿರುದ್ಧ ಯಾವುದೇ ವಿಚಾರಣೆ ಮಾಡದೇ ಕೆಳಮಟ್ಟದ ಅಧಿಕಾರಿಯಾದ ತನ್ನ ವಿರುದ್ಧ ಮಾತ್ರ ವಿಚಾರಣೆ ಮಾಡಿ ತನ್ನಿಂದ ದಾಖಲೆಗಳನ್ನು ಪಡೆಯಲು ಪ್ರಯತ್ನ ಮಾಡಿರುವುದಿಲ್ಲ. ತನ್ನ ವಿರುದ್ಧ ದೋಷಾರೋಪಣಾ ಮಾಡುವ ಪೂರ್ವದಲ್ಲಿ ತನ್ನಿಂದ ತಪ್ಪಾಗಿದ್ದಲ್ಲಿ, ಅಪರಾಧಿಕ ದಂಡ ಸಂಹಿತೆ ಕಲಂ 197 ರ ಅಡಿಯಲ್ಲಿ ಮೇಲಾಧಿಕಾರಿಗಳ ಪರವಾನಿಗೆ ಪಡೆದು ವಿಚಾರಣೆ ಮಾಡಬೇಕಾಗಿರುತ್ತದೆ. ತಾನು ಸ್ವಹಿತಾಸಕ್ತಿಯಿಂದ ಯಾವುದೇ ಕರ್ತವ್ಯಲೋಪ ಮಾಡಿರುವುದಿಲ್ಲವೆಂದು ನಮೂದಿಸಿ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ.

18. ಸದರಿ ಪ್ರಕರಣದಲ್ಲಿ, 2ನೇ ಎದುರುದಾರರಿಂದ ದಿ:26-08-2022 ರಂದು ಮುಂದುವರೆದ ಆಕ್ಷೇಪಣೆ ಸ್ವೀಕರಿಸಿದ್ದು, ತಮ್ಮ ಆಕ್ಷೇಪಣೆಯಲ್ಲಿ ಯಮಕನಮರಡಿ ಹೊಬಳಿಯ ಮಾಸ್ಕಿ ಹೊಳೆಗ್ರಾಮದ ಸರ್ವೆ ನಂ.88 ಕ್ಷೇತ್ರ 5 ಎಕರೆ 1 ಗುಂಟೆ ಜಮೀನು ಭೂಸ್ವಾದೀನಗೊಂಡಿದ್ದು, ಹಿಂದಿನ ವಿಶೇಷ ಭೂಸ್ವಾದೀನಾಧಿಕಾರಿಗಳಾದ ಶ್ರೀ. ಆರ್.ಎ.ಗಸ್ತಿ (ಪ್ರಭಾರಿ) ಇವರು ಸದರಿ ಜಮೀನನ್ನು ಹಿಡಕಲ್ ಜಲಾಶಯಕ್ಕೆ ಭೂಸ್ವಾಧೀನ ಪಡಿಸಿಕೊಂಡಿದ್ದು, ಇರುತ್ತದೆ.

19. ಗ್ರಾಮ ಲೆಕ್ಕಾಧಿಕಾರಿಗಳು ಮಣಗುತ್ತಿ ಇವರು ದಿ:21-12-2009 ರಂದು ಶ್ರೀ ಮಹಾನಿಂಗಪ್ಪ ಪಾಟೀಲ ಇವರ ಉತ್ತರ ಜೀವಿತ ಪ್ರಮಾಣ ಪತ್ರವನ್ನು ನೀಡಿರುತ್ತಾರೆ. ಉತ್ತರ ಜೀವಿತ ಪ್ರಮಾಣ ಪತ್ರದಲ್ಲಿ ಶ್ರೀ ಸುಭಾಶಚಂದ್ರ ಪಾಟೀಲ ರವರು ಏಕೈಕ ವಾರಸುದಾರರು ಇರುತ್ತಾರೆ. ಈ ಕುರಿತು ದಿ:15-01-2010 ರಲ್ಲಿ ದಾಖಲಿಸಿರುವುದು ಕಂಡುಬರುತ್ತದೆ.

20. ಶ್ರೀ ಸುಭಾಶಚಂದ್ರ ಪಾಟೀಲ ಇವರ ಹೆಸರು ಪಹಣಿ ಪತ್ರಿಕೆಯ ಕಾಲಂ ನಂ.9 ರಲ್ಲಿ ದಾಖಲಿಸಿದ ಬಗ್ಗೆ ಪರಿಹಾರ ಮೊತ್ತವನ್ನು ವಿತರಣೆ ಮಾಡುವವರೆಗೆ ಅಂದರೆ 6 ವರ್ಷಗಳ ಕಾಲ ಯಾವುದೇ ತಕರಾರು ಸಲ್ಲಿಸಿರುವುದು ಕಂಡು ಬರುವುದಿಲ್ಲ.

21. ಹಿಂದಿನ ವಿಶೇಷ ಭೂಸ್ವಾದೀನ ಅಧಿಕಾರಿಗಳಾದ ಶ್ರೀ ಆರ್.ಎ.ಗಸ್ತಿ ಇವರು ದಿ:27-07-2015 ರಂದು ಅವಾರ್ಡ ಮಾಡಿ ಭೂಸ್ವಾದೀನ ಪಡಿಸಿಕೊಂಡಿರುವುದು ದಾಖಲೆಯಿಂದ ಕಂಡು ಬರುತ್ತದೆ. ಸದರಿಯವರು ಭೂಸ್ವಾದೀನ ಪಡಿಸಿಕೊಂಡ ಜಮೀನಿಗೆ ಪರಿಹಾರ ಮೊತ್ತ ರೂ.1,04,71,394/-ಗಳನ್ನು ನಿಗಧಿಪಡಿಸಿದ್ದು, ಇರುತ್ತದೆ. ಸದರಿ ಮೊತ್ತದ ಹಣ ಸರ್ಕಾರದಿಂದ ಬಿಡುಗಡೆಗೊಂಡಿದ್ದು, ಆಯುಕ್ತರು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಹಾಗೂ ಭೂಸ್ವಾಧೀನ ಪದನಿಮಿತ್ತ ಕಾರ್ಯದಶಿಗಳು, ಕೃಷ್ಣಾ ಮೇಲ್ದಂಡೆ ಯೋಜನೆ, ಬಾಗಲಕೋಟೆ ರವರು ಜಮೀನಿಗೆ ಪರಿಹಾರ ಮೊತ್ತವನ್ನು ವಿತರಿಸುವಂತೆ ಆದೇಶಿಸಿದ್ದು, ಅದರನ್ವಯ ವಿತರಿಸಲಾಗಿರುತ್ತದೆ.

22. ಮಹಾನಿಂಗಪ್ಪ ಪಾಟೀಲ ಇವರ ಉತ್ತರ ಜೀವಿತ ಪ್ರಮಾಣ ಪತ್ರವನ್ನು ಟಪಾಲಿನಲ್ಲಿ ದಿ:29-01-2016 ರಂದು ಸ್ವೀಕರಿಸಿದ್ದು, ಸದರಿ ಸಮಯಕ್ಕೆ ಪರಿಹಾರದ ಮೊತ್ತದ ಚೆಕ್ಕನ್ನು ಬ್ಯಾಂಕಿಗೆ ಸಲ್ಲಿಸಲಾಗಿರುತ್ತದೆ. ಆದ್ದರಿಂದ ಯಾವುದೇ ಲೋಪವಾಗಿರುವುದಿಲ್ಲ. ಹಿಂದಿನ ವಿಶೇಷ ಭೂಸ್ವಾಧೀನಾಧಿಕಾರಿಗಳು, ಭೂ ಪರಿಹಾರ ಮೊತ್ತ ನಿಗಧಿಪಡಿಸಿ ಭೂಮಾಲೀಕರು ಎಂದು ಗುರುತಿಸಿದವರಿಗೆ ಮಾತ್ರ ತಾನು ಪರಿಹಾರ ಮೊತ್ತ ಸಂದಾಯ ಮಾಡಿರುವುದಾಗಿ ಆಕ್ಷೇಪಣೆಯೊಂದಿಗೆ ಸಲ್ಲಿಸಿರುತ್ತಾರೆ.

23. **4ನೇ ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ಆಕ್ಷೇಪಣೆಯನ್ನು ದಿ:30-08-2022 ರಂದು ಸಲ್ಲಿಸಿದ್ದು**, ತಾನು 2007 ರಿಂದ 2010 ರ ವರೆಗೆ ಮಣಗುತ್ತಿ ಗ್ರಾಮ ಲೆಕ್ಕಾಧಿಕಾರಿ ಎಂದು ಕರ್ತವ್ಯ ನಿರ್ವಹಿಸಿದ್ದು, ಸದರಿ ಸಮಯದಲ್ಲಿ ಸುಭಾಶಚಂದ್ರ

ಪಾಟೀಲ್ ಇವರು ಉತ್ತರ ಜೀವಿತ ಪ್ರಮಾಣ ಪತ್ರವನ್ನು ನೀಡುವಂತೆ ಅರ್ಜಿ ಸಲ್ಲಿಸಿದ್ದು, ಸದರಿ ಸಮಯದಲ್ಲಿ ಹಾಜರುಪಡಿಸಿದ ದಾಖಲೆಯನ್ನು ಪರಿಶೀಲಿಸಿ ಕೈಬರಹದ ಉತ್ತರ ಜೀವಿತ ಪತ್ರ ನೀಡಿದ್ದು, ಆದರೆ ಸದರಿ ಕೈಬರಹದ ವಾರಸಾ ಪ್ರಮಾಣ ಪತ್ರವನ್ನು ಸ್ವೀಕರಿಸುವ ಅಥವಾ ತಳ್ಳಿ ಹಾಕುವ ಅಧಿಕಾರ ತಹಶೀಲ್ದಾರವರಿಗೆ ಇರುತ್ತದೆ. ತಹಶೀಲ್ದಾರರು ನಂತರ ಗಣಕೀಯಂತ್ರದ ಪ್ರಮಾಣ ಪತ್ರವನ್ನು ನೀಡಿರುತ್ತಾರೆ. ಆ ನಂತರ ಪಹಣಿಯಲ್ಲಿ ತಮ್ಮ ಹೆಸರನ್ನು ದಾಖಲಿಸಿಕೊಳ್ಳಲು ಅವಕಾಶವಿರುತ್ತದೆ. ತಾನು 2010 ರಲ್ಲಿ ವರ್ಗಾವಣೆಗೊಂಡ ನಂತರ ತನ್ನ ಕೈಬರಹದ ಉತ್ತರ ಜೀವಿತ ಪ್ರಮಾಣ ಪತ್ರವನ್ನು ತಹಶೀಲ್ದಾರ ಕಾರ್ಯಾಲಯಕ್ಕೆ ಕಳುಹಿಸಿರುತ್ತಾರೆ.

24. ದಿ:15-01-2010 ರಂದು ಸುಭಾಶಚಂದ್ರ ಪಾಟೀಲ್ ಇವರು ತಾನು ಒಬ್ಬನೇ ಮೃತ ಮಹಾನಿಂಗಪ್ಪ ಪಾಟೀಲ ಅವರ ವಾರಸುದಾರರೆಂದು ಅರ್ಜಿ ಸಲ್ಲಿಸಿದ್ದು, ಸದರಿ ಉತ್ತರ ಜೀವಿತ ಪ್ರಮಾಣ ಪತ್ರದನ್ವಯ ಆರ್.ಟಿ.ಸಿ.ಯಲ್ಲಿ ದಾಖಲಿಸಲು ತನ್ನ ಮೇಲಾಧಿಕಾರಿಗಳು ಅನುಮತಿಯನ್ನು ನೀಡಿರುತ್ತಾರೆ. ಭೂ-ಸ್ವಾಧೀನಗೊಂಡ ಜಮೀನಿನ ಕುರಿತು ತಾನು ಭೂಮಾಲೀಕರ ವಾರಸುದಾರರೆಂದು ದೂರುದಾರರು ಯಾವುದೇ ತಕರಾರನ್ನು 2016 ರವರೆಗೆ ಸಲ್ಲಿಸಿರುವುದಿಲ್ಲ. ಭೂಸ್ವಾಧೀನಾಧಿಕಾರಿಗಳು ಪರಿಹಾರ ಹಣವನ್ನು ಸಂದಾಯ ಮಾಡುವ ಪೂರ್ವದಲ್ಲಿ ಮುಚ್ಚಳಿಕೆ ಪತ್ರ ಪಡೆಯದೆ ನಿಯಮಗಳನ್ನು ಪಾಲಿಸಿರುವುದಿಲ್ಲ.

25. ವಿಶೇಷ ಭೂ-ಸ್ವಾಧೀನಾಧಿಕಾರಿಗಳು ದೂರುದಾರರು ಅರ್ಜಿ ಸಲ್ಲಿಸಿದ ನಂತರ ಸುಬಾಸಚಂದ್ರ ಪಾಟೀಲ್ ರವರ ಎಲ್ಲಾ ಆಸ್ತಿಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಪಹಣಿ ಪತ್ರಿಕೆಯಲ್ಲಿ ಸರ್ಕಾರಕ್ಕೆ ಭೋಜಾ ಎಂದು ದಾಖಲಿಸಿಕೊಳ್ಳಲು ಯಾವುದೇ ಕ್ರಮವನ್ನು ವಹಿಸಿರುವುದು ಕಂಡುಬರುವುದಿಲ್ಲ ತನ್ನ ವಿರುದ್ಧ ಸುಳ್ಳು ಆಪಾದನೆ ಮತ್ತು ದೋಷಾರೋಪಣಾ ಮಾಡಿರುತ್ತಾರೆ ಎಂಬಂತೆ ನಮೂದಿಸಿ ಸಲ್ಲಿಸಿರುತ್ತಾರೆ.

26. **ಸದರಿ ಪ್ರಕರಣದಲ್ಲಿ, 5ನೇ ಎದುರುದಾರರಿಂದ ದಿ:29/11/2022ರ ಆಕ್ಷೇಪಣೆ ಸ್ವೀಕರಿಸಿದ್ದು,** ಪರಿಶೀಲಿಸಲಾಗಿ, ಕಾರ್ಯನಿರ್ವಾಹಕ ಅಭಿಯಂತರರು, ಕ.ನಿ.ನಿ.ನಿ., ವಿಭಾಗ-2, ಹಿಡಕಲ್ ಡ್ಯಾಂ ರವರು ಹುಕ್ಕೇರಿ ತಾಲ್ಲೂಕಿನ ಮಾಸ್ತಿಹೊಳೆ ಗ್ರಾಮದ ಜಮೀನುಗಳನ್ನು ಹಿಡಕಲ್ ಅಣೆಕಟ್ಟಿನ ಹಿನ್ನೀರಿನಲ್ಲಿ ಮುಳುಗಡೆ ಹೊಂದಿದ ಜಮೀನುಗಳಿಗೆ ಭೂಸ್ವಾಧೀನ ಮಾಡುವ ಸಲುವಾಗಿ ಅಧಿಸೂಚನೆ-4(1)ರನ್ವಯ ದಿ:29/11/2011 ರಂದು ಹೊರಡಿಸಲಾಗಿದೆ. ಅದರನ್ವಯ ದಿ:10/09/2013 ರಂದು ಮಾಸ್ತಿಹೊಳೆ ಗ್ರಾಮದ ಜಮೀನುಗಳ ಕ್ಷೇತ್ರ ವಿವರಗಳನ್ನು ತಯಾರಿಸಿ ಪ್ರಸ್ತಾವನೆಯನ್ನು ವಿಶೇಷ ಜಿಲ್ಲಾಧಿಕಾರಿಗಳು, ಭೂ ಸ್ವಾಧೀನ, ಬೃಹತ್ ನೀರಾವರಿ ಯೋಜನೆಗಳು, ಬೆಳಗಾವಿ ಇವರಿಗೆ ಸಲ್ಲಿಸಲಾಗಿರುತ್ತದೆ.

27. ವಿಶೇಷ ಭೂಸ್ವಾಧೀನಾಧಿಕಾರಿಗಳು, ಹಿಡಕಲ್ ಡ್ಯಾಂ ರವರು ದಿ:16/12/2014 ರಂದು ಕಲಂ 6(1)ರನ್ವಯ ಅಧಿಸೂಚನೆಯನ್ನು ತಯಾರಿಸಿ ಸರ್ಕಾರದ ಕಾರ್ಯದರ್ಶಿಗಳು ಕೃಷ್ಣ ಮೇಲ್ದಂಡೆ ಯೋಜನೆ ಬಾಗಲಕೋಟೆ ಇವರಿಗೆ ಸಲ್ಲಿಸಿದ್ದು, ದಿ:18/12/2014 ರಂದು ಅನುಮೋದನೆ ಪಡೆಯಲಾಗಿರುತ್ತದೆ. ದಿ:25/12/2014 ರಂದು ಅಧಿಸೂಚನೆಯನ್ನು ಪ್ರಕಟಿಸಲಾಗಿರುತ್ತದೆ.

28. ಮಾಸ್ತಿಹೊಳೆ ಗ್ರಾಮದ ಸ.ನಂ.88ರ ಭೂ ಮಾಲೀಕ ಮಹಾಲಿಂಗಪ್ಪ ಪಾಟೀಲ್ ಸಾಕಿನ ನರಸಿಂಗಪುರ ಇವರು ದಿ:06/03/1999 ರಂದು ಮರಣ ಹೊಂದಿದ ಬಗ್ಗೆ ತಹಶೀಲ್ದಾರರು ಮರಣ ಸಮರ್ಥನೆ ಪ್ರಮಾಣ ಪತ್ರ ನೀಡಿರುತ್ತಾರೆ. ಮಹಾಲಿಂಗಪ್ಪ ಪಾಟೀಲ್ ಇವರು ಮರಣ ಹೊಂದಿದ ನಂತರ ಸುಭಾಷಚಂದ್ರ ಪಾಟೀಲ್ ಇವರು ಮಾತ್ರ ವಾರಸುದಾರರೆಂದು ಗ್ರಾಮ

ಲೆಕ್ಕಾಧಿಕಾರಿ ಮಣಗುತ್ತಿ ಇವರು ಉತ್ತರ ಜೀವಿತ ಪ್ರಮಾಣ ಪತ್ರವನ್ನು ದಿ:21/12/2009 ರಂದು ನೀಡಿರುತ್ತಾರೆ.

29. ಸುಭಾಷ್‌ಚಂದ್ರ ಪಾಟೀಲ್ ರವರು ತಹಶೀಲ್ದಾರ್ ಹುಕ್ಕೇರಿ ರವರಿಗೆ ದಿ:05/01/2010 ರಂದು ಅರ್ಜಿ ಸಲ್ಲಿಸಿ ಮಾಸ್ತಿಹೊಳೆ ಗ್ರಾಮದ ಸ.ನಂ.88ರ ಮಾಲೀಕರು 06/03/1999 ರಂದು ಮರಣ ಹೊಂದಿದ್ದು, ತಾನು ಒಬ್ಬನೇ ವಾರಸುದಾರ ಎಂದು ತಿಳಿಸಿ, ವಾರಸ ಪ್ರಮಾಣ ಪತ್ರ ಲಗತ್ತಿಟ್ಟು ತನ್ನ ಹೆಸರು ದಾಖಲು ಮಾಡಲು ಅರ್ಜಿ ಸಲ್ಲಿಸಿರುತ್ತಾರೆ. ಅದರನ್ವಯ ದಿ:27/02/2010 ರಂದು ಸ.ನಂ.88 ಕ್ಷೇತ್ರ 5.01ಎಕರೆ ಸುಭಾಷಚಂದ್ರ ಪಾಟೀಲ್ ರವರ ಹೆಸರಿಗೆ ದಾಖಲಾಗಿರುತ್ತದೆ. ಸುಭಾಷಚಂದ್ರ ಪಾಟೀಲ್ ಇವರ ಹೆಸರು ಪಹಣಿ ಪತ್ರಿಕೆಯ 2011-12ನೇ ಸಾಲಿನಲ್ಲಿ ದಾಖಲಿಸಲಾಗಿರುವುದು ಕಂಡುಬರುತ್ತದೆ. ಭೂಸ್ವಾಧೀನಕ್ಕಾಗಿ ಪ್ರಸ್ತಾವನೆಯನ್ನು ದಿ:29/11/2011 ರಂದು ಕಾರ್ಯನಿರ್ವಾಹಕ ಅಭಿಯಂತರರು, ಕ.ನಿ.ನಿ.ನಿ., ವಿಭಾಗ-2, ಹಿಡಕಲ್ ಡ್ಯಾಂ ಇವರು ಸಲ್ಲಿಸಿದ ನಂತರ ಭೂಸ್ವಾಧೀನ ಪ್ರಕರಣ ಪ್ರಾರಂಭ ಆಗಿದ್ದು ಇರುತ್ತದೆ.

30. ಭೂಸ್ವಾಧೀನಗೊಂಡ ಸ.ನಂ.88ಕ್ಕೆ ದಿ:27/07/2015 ರಂದು ಅವಾರ್ಡ್‌ನ್ನು ತಯಾರಿಸಿ, ಆಯುಕ್ತರು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ, ಕೃಷ್ಣ ಮೇಲ್ದಂಡೆ ಯೋಜನೆ, ಬಾಗಲಕೋಟೆ ಇವರಿಗೆ ಮಂಜೂರಾತಿಗೆ ಸಲ್ಲಿಸಲಾಗಿದೆ ಅವಾರ್ಡ್‌ದಲ್ಲಿ ಸುಭಾಷಚಂದ್ರ ಪಾಟೀಲ್ ರವರ ಹೆಸರು ಮಾತ್ರ ದಾಖಲಿರುವುದರಿಂದ ಮತ್ತು ಪಹಣಿಯಲ್ಲಿ ಸದರಿಯವರ ಹೆಸರು ದಾಖಲಿರುವುದರಿಂದ ಯಾವುದೇ ಲೋಪದೋಷ ಇರುವುದಿಲ್ಲ. ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭವಾದ ದಿ:29/11/2011 ರಿಂದ 27/07/2015 ವರೆಗೆ ಅವಾರ್ಡ್ ತಯಾರಿಸಿ ಮಂಜೂರಾತಿಗೆ ಸಲ್ಲಿಸುವವರೆಗೆ ಅರ್ಜಿದಾರರಿಂದ

ಯಾವುದೇ ತಕರಾರು ಬಂದಿರುವುದಿಲ್ಲ. ತಾನು ದಿ:27/07/2015 ರಂದು ವಿಶೇಷ ಭೂಸ್ವಾಧೀನಾಧಿಕಾರಿಗಳ ಪ್ರಭಾರವನ್ನು ಎಸ್.ಎಸ್.ಬಿರಾದರ್, ಉಪವಿಭಾಗಾಧಿಕಾರಿಗಳು, ಚಿಕ್ಕೋಡಿ ಇವರಿಗೆ ವಹಿಸಿಕೊಟ್ಟಿರುತ್ತೇನೆ ಹಾಗೂ ತಾನು ದಿ:31/07/2016 ರಂದು ಸರ್ಕಾರಿ ಸೇವೆಯಿಂದ ನಿವೃತ್ತನಾಗಿರುವುದಾಗಿ ಆಕ್ಷೇಪಣೆ ಸಲ್ಲಿಸಿರುತ್ತಾರೆ.

31. 4ನೇ ಎದುರುದಾರರು ದಿ: 15.01.2010 ರಂದು ಉತ್ತರ ಜೀವಿತ ಪ್ರಮಾಣ ಪತ್ರ ನೀಡುವಂತೆ ಅರ್ಜಿ ಸಲ್ಲಿಸಿದ್ದರಿಂದ 4ನೇ ಎದುರುದಾ ರರು ಕೈಬರಹದಲ್ಲಿ ನೀಡಿದ ಪ್ರಮಾಣ ಪತ್ರದನ್ವಯ ದಿ: 27.02.2010 ರಂದು ಸುಭಾಷಚಂದ್ರ ಪಾಟೀಲ ರವರ ಹೆಸರನ್ನು ವಾರಸಾದಂತೆ ಪಹಣಿಯಲ್ಲಿ ದಾಖಲಿಸಿದ್ದು, ಮಹಾನಿಂಗಪ್ಪ ಪಾಟೀಲ, ಇವರ ವಾರಸುದಾರರಾದ ಸುಭಾಷಚಂದ್ರ ಪಾಟೀಲ, ಅವರು ಮೃತ ತಂದೆಯ ಉತ್ತರ ಜೀವಿತ ಪ್ರಮಾಣ ಪತ್ರಕ್ಕೆ ಅರ್ಜಿ ಸಲ್ಲಿಸಿದಾಗ ಸದರಿ ಮಹಾನಿಂಗಪ್ಪ ಪಾಟೀಲ ಇವರ ವಾರಸುದಾರರು ಯಾರ್‍ಯಾರು ಎಂಬುದನ್ನು ಮನವರಿಕೆ ಮಾಡಿ ಕೊಳ್ಳದೇ ಸುಭಾಷಚಂದ್ರ ಪಾಟೀಲ, ರವರೊಬ್ಬರೇ ವಾರಸುದಾರರೆಂದು ದೃಢೀಕರಣ ಪತ್ರ ನೀಡಿರುವುದು ದಾಖಲೆಯಿಂದ ದೃಢಪಡುತ್ತದೆ.

32. ಉತ್ತರ ಜೀವಿತ ಪ್ರಮಾಣ ಪತ್ರದ ಆಧಾರದ ಮೇರೆಗೆ ತಹಶೀಲ್ದಾರರು, ಮಾಸ್ತಿಹೊಳೆ ಗ್ರಾಮದ ಸ.ನಂ. 88 ರಲ್ಲಿ 5 ಎಕ್ರೆ 1 ಗುಂಟೆಗೆ ವಾರಸಾ ಎಂದು ಆರ್.ಟಿ.ಸಿ.ಯಲ್ಲಿ ಒಬ್ಬರ ಹೆಸರನ್ನು ಮಾತ್ರ ದಾಖಲಿಸಿದ್ದು, ಸದ್ರಿ ಜಮೀನು ಭೂ ಸ್ವಾಧೀನಗೊಂಡ ನಂತರ ಪಹಣಿಯಲ್ಲಿರುವ ವಾರಸಾದಂತೆ ಪರಿಹಾರವನ್ನು ವಿತರಿಸಲು 5ನೇ ಎದುರುದಾರರು ಕ್ರಮವಹಿಸಿರುವುದು ಕಂಡುಬರುತ್ತದೆ.

33. 2ನೇ ಎದುರುದಾರರು ಸುಭಾಷಚಂದ್ರ ಪಾಟೀಲ, ರವರಿಗೆ ಪರಿಹಾರ ಧನ ವಿತರಿಸುವುದನ್ನು ತಡೆಹಿಡಿಯಬೇಕೆಂದು ಕೋರಿ, ದೂರುದಾರರು ದಿ: 29.01.2016 ರಂದು ತಕರಾರು ಅರ್ಜಿ ಸಲ್ಲಿಸಿದ್ದು, ಆದರೆ 2ನೇ ಎದುರುದಾರರು ದಿನಾಂಕ: 29.01.2016 ರಂದು ಪರಿಹಾರ ಮೊತ್ತ ವಿತರಿಸಲು ಬ್ಯಾಂಕಿನಲ್ಲಿ ಸ್ವೀಕೃತವಾದ ಚೆಕ್‌ನ್ನು ತಡೆಹಿಡಿಯಲು ಯಾವುದೇ ಕ್ರಮ ವಹಿಸದೇ ಹೋಗಿರುವುದು ದಾಖಲೆಗಳಿಂದ ಕಂಡುಬರುತ್ತಿದ್ದು, ಆದರೆ ದೂರುದಾರರ ಅರ್ಜಿ ದಿನಾಂಕ; 28.01.2016 ರಂದು ಸ್ವೀಕೃತಿಗೊಂಡಿರುವು ದಿಲ್ಲವೆಂದು ಆಕ್ಷೇಪಣೆಯಲ್ಲಿ ತಿಳಿಸಿದ್ದು ಇರುತ್ತದೆ. ಎದುರುದಾರರೇ ಸಲ್ಲಿಸಿರುವ ದಾಖಲೆಯನ್ನು ಪರಿಶೀಲಿಸಲಾಗಿ, ದಿ: 29.01.2016 ರಂದು ದೂರುದಾರರ ಮನವಿ ಪತ್ರ ಕಛೇರಿಯಲ್ಲಿ ಸ್ವೀಕೃತಿಗೊಂಡಿದ್ದು, ದಾಖಲೆಯಿಂದ ಕಂಡುಬರುತ್ತದೆ. ಹಾಗೂ ವ್ಯವಸ್ಥಾಪಕರು, ಎಸ್.ಬಿ.ಎಂ. ಹುಕ್ಕೇರಿ, ಶಾಖೆಗೆ 2ನೇ ಎದುರುದಾರರು ಹಣ ವಿತರಣೆ ಮಾಡಲು ಕಳುಹಿಸಿದ ಚೆಕ್ ಮತ್ತು ಪತ್ರದ ಪ್ರತಿಯನ್ನು ದಿ: 30.01.2016 ರಂದು ಸ್ವೀಕರಿಸಿರುವುದು ದಾಖಲೆಯಿಂದ ಕಂಡುಬರುತ್ತದೆ. ಆದ್ದರಿಂದ 2ನೇ ಎದುರುದಾರರಿಗೆ ದೂರುದಾರರು ತಕರಾರು ಅರ್ಜಿ ಸಲ್ಲಿಸಿದ ನಂತರ ಹಣ ತಡೆಹಿಡಿಯುವ ಅಧಿಕಾರ ವ್ಯಾಪ್ತಿ ಹೊಂದಿದ್ದರೂ ಸಹ ಕ್ರಮ ವಹಿಸದೇ ಹೋಗಿದ್ದರಿಂದ ದೂರುದಾರರಿಗೆ ಹಾಗೂ ಇತರೇ 3 ಜನರಿಗೆ ಜಮೀನಿನ ಪರಿಹಾರ ಧನದಲ್ಲಿ ಬರಬೇಕಾದ ಭಾಗ ಬಾರದಂತೆ ಸುಭಾಷಚಂದ್ರ ಪಾಟೀಲ ರವರು ಒಬ್ಬರೇ ಸ್ವೀಕರಿಸಿರುವುದರಿಂದ ದೂರುದಾರರಿಗೆ ನಷ್ಟ ಉಂಟಾಗಿರು ವುದು ದೃಢಪಡುತ್ತದೆ.

34. ಸದರಿ ಪ್ರಕರಣದಲ್ಲಿ 1, 3 ಹಾಗೂ 5ನೇ ಎದುರುದಾರರು ತಮ್ಮ ಕರ್ತವ್ಯ ದಲ್ಲಿ ಯಾವುದೇ ಲೋಪವೆಸಗಿರುವುದು ಕಂಡು ಬಾರದ ಕಾರಣ ಸದರಿಯವರು ಸಲ್ಲಿಸಿದ ಆಕ್ಷೇಪಣೆಯನ್ನು ಒಪ್ಪಿ ಪ್ರಕರಣದಿಂದ ಕೈ ಬಿಡಲಾಗಿದೆ.

35. ಈ ಮೇಲ್ಕಾಣಿಸಿದ ಎಲ್ಲ ಅಂಶಗಳಿಂದ 2 ಮತ್ತು 4ನೇ ಎದುರುದಾರರು ತಮ್ಮ ಕರ್ತವ್ಯದಲ್ಲಿ ಲೋಪವೆಸಗಿದ್ದರಿಂದ ದೂರುದಾರರು ಹಾಗೂ ಅವರ ವಾರಸು ದಾರರಿಗೆ ದೊರೆಯಬೇಕಾಗಿದ್ದ ಜಮೀನಿನ ಪರಿಹಾರ ಮೊತ್ತವು ಸಿಗದೇ ನಷ್ಟ ಅನುಭವಿಸಿರುವುದು, ಮೇಲ್ನೋಟಕ್ಕೆ ದೃಢಪಡುತ್ತದೆ.

36. ಮೇಲೆ ಚರ್ಚಿಸಲಾದ ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 2021ರ ನಿಯಮಗಳು 3(1) (i) ರಿಂದ (iv) ರನ್ವಯ **2ನೇ ಎದುರುದಾರರಾದ** ಶ್ರೀಮತಿ ರಾಜಶ್ರೀ ಜೈನಾಪುರೆ, ಭೂ ಸ್ವಾಧೀನಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಪ್ರಸ್ತುತ ಕಾರ್ಯದರ್ಶಿ, ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ಬೆಂಗಳೂರು ಹಾಗೂ **4ನೇ ಎದುರುದಾರರಾದ** ಶ್ರೀ ಸಂಜೀವ ಬಾಳಪ್ಪ ಮಂಡಲಿ, ಅಂದಿನ ಗ್ರಾಮ ಲೆಕ್ಕಾಧಿಕಾರಿ, ಮಣಗುತ್ತಿ ಗ್ರಾಮ, ಹುಕ್ಕೇರಿ ತಾಲೂಕು, ಪ್ರಸ್ತುತ ಕಂದಾಯ ನಿರೀಕ್ಷಕರು, ತಾಲೂಕು ಕಛೇರಿ, ಖಾನಾಪುರ, ಬೆಳಗಾವಿ ಜಿಲ್ಲೆ ಇವರುಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲು, ಕರ್ನಾಟಕ ನಾಗರಿಕ ಸೇವೆಗಳು(ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು "ಉಪಲೋಕಾಯುಕ್ತರಿಗೆ" ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸು ಮಾಡಲಾಗಿದೆ.

37. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(4) ರ ಪ್ರಕಾರ, ಸಕ್ಷಮ ಪ್ರಾಧಿಕಾರವು ಈ ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ವರದಿ ಮಾಡಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿದೆ.

28/2/23

[ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.